ಭೇಟಿಯ ಹಿಂದಿನ ದಿನ ಸಾಯಂಕಾಲ ಮನೆತಲಪಿದವಳು ಕೆಳಗಿನ ಮನೆಯಲ್ಲಿದ್ದ ಮನೆಯೊಡತಿಯ ಕರೆಗಂಟೆ ಬಾರಿಸಿದೆ. ಅದೊಂದು ಸಣ್ಣ ಬಂಗಲೆ. ಮನೆಯೊಡತಿ ಕೆಳಗಿನ ಮನೆಯಲ್ಲಿದ್ದರೆ, ಹೊರಜಗಲಿಯ ಮರದ ಪಾವಟಿಗೆಗಳನ್ನು ಹತ್ತಿದರೆ ಸಿಗುವ ಮೇಲಿನ ನಾಲ್ಕು ಕೋಣೆಗಳಲ್ಲಿ ನನ್ನ ವಾಸ. ಮಾಹಿಮ್ ಚರ್ಚಿನ ಹಿಂದಿರುವ ಆ ಮನೆಯಿಂದ ನಾನು ಕೆಲಸ ಮಾಡುವ ಆಫೀಸಿಗೆ ಬರೇ ಇಪ್ಪತ್ತು ನಿಮಿಷಗಳ ಕಾರು-ಸವಾರಿ, ಹಾಗಾಗಿ ನನಗೆ ಅದು ಅನುಕೂಲಕರವಾಗಿತ್ತು.

ಊರುಗೋಲಿನ ಸದ್ದು ಹತ್ತಿರವಾಗುತ್ತಿತ್ತು. ಒಂದೇ ಬೆಲ್ಲು, ಎಷ್ಟು ಹೊತ್ತಾದರೂ ಕಾಯಬೇಕು, -ಮನೆಬಾಡಿಗೆಗೆ ಹಿಡಿಯುವಾಗ ನಿಗದಿಪಡಿಸಿದ ನಿಯಮಗಳಲ್ಲಿ ಇದು ಒಂದು. ಕಾದೆ. ಈಗ ನಾನು ಬಂದುದೂ ಇನ್ನೊಂದು ನಿಯಮದ ಪಾಲನೆಗೇ – ಮರುದಿನ ಪೆರಿನಾಝುಳಲ್ಲಿಗೆ ಹೋಗುವ ಕಾರಣ, ವಾಪಸ್ಸು ಬರಲು ತಡವಾಗಬಹುದು ಎನ್ನುವುದನ್ನು ಮುಂಚಿತವಾಗಿ ತಿಳಿಸಲು. ಇಲ್ಲಿಯೂ ಪೆರಿನಾಝುಳ ಬಗ್ಗೆ ಇನ್ನೊಂದಿಷ್ಟು 'ಜ್ಞಾನ' ಸಿಗಬಹುದೆಂದು ಮಾತ್ರ ಊಹಿಸಿರಲಿಲ್ಲ.

ಪೆರಿನಾಝುಳ ಹೆಸರು ಕೇಳಿದ ಕೂಡಲೆ, 'ಯಾರು? ಪೆರಿನಾಝ್ ವಾಡಿಯಾ? ಪೆಡ್ಡಾ ರೋಡಿನಲ್ಲಿದ್ದವಳು? ಅವಳಿನ್ನೂ ಬದುಕಿದ್ದಾಳೆಯೇ?' ಎಂದು ಬಾಗಿಲಲ್ಲಿ ಕೋಲೂರಿಕೊಂಡು ನಿಂತ ಐರಿನ್ ಡಿ'ಸೋಜಾ ಕಣ್ಣರಳಿಸಿದಳು. ನಿಂತೇ ಇದ್ದರೆ ಕಾಲು ನೋವೆಂದು ಅಲ್ಲೇ ಬಾಲ್ಕನಿಯ ಕುರ್ಚಿಯಲ್ಲಿ ಕುಳಿತು ಮಾತು ಮುಂದುವರಿಸಿದಳು.

ಐರಿನಳಿಗೆ ನಾಲ್ವತ್ತು ವರ್ಷಗಳ ಕೆಳಗೆ ಕ್ಸೇವಿಯರ್ಸ್ ಕಾಲೇಜಿನಲ್ಲಿ ಕಲಿಯುವಾಗ ಪೆರಿನಾಝುಳನ್ನು ನೋಡಿದ ನೆನಪು. ಅವಳಿಗಿಂತ ಮೇಲಿನ ತರಗತಿಯಲ್ಲಿದ್ದ ಪೆರಿನಾಝುಳು ಪದವಿಯನ್ನೂ ಪೂರ್ಣಗೊಳಿಸದೆ ಅರ್ಧದಲ್ಲೇ ಕಾಲೇಜು ಬಿಟ್ಟಿದ್ದಳಂತೆ. ಆ ಮೇಲೆ ಅವಳ ಸುದ್ದಿ ಕೇಳಿರಲಿಲ್ಲ ಎಂದು ವಿಷಾದಿಸಿದಳು.

ಐರೀನಳು ಹೇಳುತ್ತ ಹೋದಂತೆ ತರುಣಿ ಪೆರಿನಾಝುಳ ಸೂಕ್ಷ್ಮಮನಃಸ್ಥಿತಿಯ ನೋವು-ದುಃಖಗಳ ಇಣುಕುನೋಟ ಸಿಕ್ಕಿ ಮನಸ್ಸಿಗೆ ನಾಟಿತು. ಮಾತು ಕೇಳುತ್ತ ನಾನೂ ಅಲ್ಲೇ ದಂಡೆಯ ಮೇಲೆ ಕುಳಿತುಕೊಂಡೆ.

ಚಿಕ್ಕಪ್ರಾಯದಲ್ಲಿ ತಂದೆ-ತಾಯಂದಿರೊಂದಿಗೆ ಲಂಡನ್ನಿನಲ್ಲಿದ್ದ ಪೆರಿನಾಝ್, ಅಲ್ಲಿ ಏನಾಯಿತೋ, ಹೈಸ್ಕೂಲು ಮುಗಿದದ್ದೇ ತಾಯಿಯೊಟ್ಟಿಗೆ ಭಾರತಕ್ಕೆ ಬಂದಿದ್ದಳಂತೆ. 'ತಂದೆ ಮಹಾ ಶೋಕಿಲಾಲ,' ದೇಶವಿದೇಶಗಳ ಪ್ರವಾಸ ಮಾಡುತ್ತಿದ್ದವನಿಗೆ, ಅಲ್ಲಲ್ಲಿ ಹುಡುಗಿಯರೊಂದಿಗೆ ಒಡನಾಟವಿತ್ತು. ಪ್ಯಾರೀಸಿನ ರೂಪದರ್ಶಿಯೊಬ್ಬಳೊಂದಿಗೆ ಮದುವೆಯಾಗುವವನೂ ಇದ್ದ. ಅವನಿಗೆ ಅರವತ್ತರ ಹತ್ತಿರದ ಪ್ರಾಯವಾದರೆ, ಆ ರೂಪದರ್ಶಿಯಾದರೋ ಇಪ್ಪತ್ತರ ತರುಣಿ. ತಂದೆ-ತಾಯರ ವಿಚ್ಛೇದನದ ಸಮಯ ದೊಡ್ಡ ಮೊಕದ್ದಮೆ ನಡೆದು ಮಹಾರಂಪವಾಯಿತು. ಅವಳ ತಾಯಿಯೂ ಕೋರ್ಟಿನ ಕಟ್ಟೆ ಹತ್ತಬೇಕಾಯಿತು. ಮಾನಸಿಕವಾಗಿಯೂ, ದೈಹಿಕವಾಗಿಯೂ ಜರ್ಜರಿತಳಾಗಿ ಹೋಗಿದ್ದ ಅವಳ ತಾಯಿ ಮೊಕದ್ದಮೆ ಮುಗಿದ ಮೇಲೆ ಹೆಚ್ಚುಕಾಲ ಬದುಕಲಿಲ್ಲವಂತೆ. ಗಂಡನಿಂದ ತನಗಾದ ಸಾರ್ವಜನಿಕ ಅಪಮಾನವನ್ನು ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡದ್ದು ಎನ್ನುವ ಸುದ್ದಿಯೂ ಇತ್ತು.

ವರ್ಷದ ವರೆಗೆ ಮುಂದುವರಿದ ಮೊಕದ್ದಮೆಯು ಪತ್ರಿಕೆಗಳಿಗೆ ಬಿಸಿ ಬಿಸಿ ಸುದ್ದಿಯಾಗಿತ್ತು. ವಾಡಿಯಾನಿಗೋ ತಟಕೂ ತಲೆಬಿಸಿ ಇರಲಿಲ್ಲ. ಅವನಿಗೆ ಈ ಎಲ್ಲ ಪ್ರಚಾರದಲ್ಲಿ ಖುಶಿಯೇ ಇದ್ದಂತಿತ್ತು. ಬಹಿರಂಗವಾಗಿ ಆತನ ಏನೇನೋ ಹೇಳಿಕೆಗಳು ಬರುತ್ತಿದ್ದವು. ಎಪ್ಪತ್ತರ ದಶಕದಲ್ಲಿ ತನಿಖಾ ವರದಿಗೆ ಹೆಸರುಮಾಡಿದ್ದ 'ಬ್ಲಿಝ್' ಪತ್ರಿಕೆಗಂತೂ ಈ ಮೊಕದ್ದಮೆ ಒಳ್ಳೆಯ ಮಸಾಲೆಯನ್ನು ಒದಗಿಸಿತ್ತು ಎನ್ನುವಾಗ ಐರೀನಳು ಆ ಸಂದರ್ಭದ ಕೆಲವು ಘಟನೆಗಳನ್ನು ನೆನಪು ಮಾಡಲು ಯತ್ನಿಸಿದಳು. 'ಬ್ಲಿಝ್'ನ ಸಂಪಾದಕ ರೂಸಿ ಕರಾಂಜಿಯಾ ಪ್ರತಿದಿನ ಸ್ವತಃ ನ್ಯಾಯಾಲಯಕ್ಕೆ ಹೋಗಿ ಕುಳಿತು ರಸವತ್ತಾಗಿ ವರದಿ ಬರೆಯುತ್ತಿದ್ದನಂತೆ. ವಾಡಿಯಾ ಕುಟುಂಬದ ವೈಯುಕ್ತಿಕ ಬದುಕಿನ ವಿವರಗಳು ಸಾರ್ವಜನಿಕವಾಗಿ ಚರ್ಚೆಗೊಳಲ್ಪಡುವಂತಾಗಿತ್ತು.

